ಮಂಜಳಂಗಡೆಯಾದ ಹಳ್ಳಿಗಳ ಪುನರ್ವಸತಿ

೩೩೭. ಶ್ರೀ ಬಾಬುರೆಡ್ಡಿ ತುಂಗಳ್ (ಬೀಳಗಿ).—ಮಾನ್ಯ ಕಂದಾಯ ಮತ್ತು ಯೋಜನಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ೧೯೯೦ರೊಳಗಾಗಿ ಕೃಷ್ಣಾ ಮೇಲ್ದಂಡೆ ಯೋಜನೆಯಡಿಯಲ್ಲಿ ಮುಳುಗಡೆಯಾಗುವ ಹಳ್ಳಿಗಳ ಸಂಖ್ಯೆ ಎಷ್ಟು ?

ಆ) ಮುಳುಗಡೆಯಾಗುವ ಹಳ್ಳಿಗಳ ಪುನರ್ವಸತಿಗಾಗಿ ಸರ್ಕಾರವು ಮಾಡಿರುವ ಪರ್ಯಾಯ ವ್ಯವಸ್ಥೆಯೇನು ?

ಇ) ಈ ಬಗ್ಗೆ ಎಷ್ಟು ಕಡೆ ಪುನರ್ವಸತಿ ಕೇಂದ್ರಗಳ ನಿರ್ಮಾಣ ಮಾಡಲಾಗಿದೆ ಹಾಗೂ ಆ ಬಗ್ಗೆ ಆಗಿರುವ ವೆಚ್ಚವೆಷ್ಟು ?

ಈ) ಈ ಪುನರ್ವಸತಿ ಕೇಂದ್ರಗಳಲ್ಲಿ ಒದಗಿಸಿರುವ ಸೌಕರ್ಯಗಳೇನು ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಕಾಡಾ ಮತ್ತು ನೀರಾವರಿ ಸಚಿವರು).—

ಅ) ಬಸವ ಸಾಗರ (ನಾರಾಯಣಪುರ)ಜಲಾಶಯದಲ್ಲಿ ೩೬ ಹಳ್ಳಿಗಳು ಮತ್ತು ಆಲಮಟ್ಟಿ ಜಲಾಶಯದಲ್ಲಿ ೫೪ ಹಳ್ಳಿಗಳು ಮುಳುಗಡೆಯಾಗುತ್ತವೆ.

ಆ) ಮುಳುಗಡೆಯಾಗುವ ಹಳ್ಳಿಗಳ ಸಲುವಾಗಿ ಪುನರ್ವಸತಿ ಕೇಂದ್ರಗಳನ್ನು ಕಟ್ಟಲಾಗಿದೆ.

ಇ) ನಿರ್ಮಾಣ ಮಾಡಲಾದ ಪುನರ್ವಸತಿ ಕೇಂದ್ರಗಳ ಸಂಖ್ಯೆ ಹಾಗೂ,ಅವುಗಳಿಗೆ ಮಾಡಲಾದ ಖರ್ಚಿನ ವಿವರಗಳು ಈ ರೀತಿ ಇವೆ :—

	ಬಸವಸಾಗರ ಜಲಾಶಯ	ಆಲಮಟ್ಟಿ ಜಲಾಶಯ
೧	ಪುನರ್ವಸತಿ ಕೇಂದ್ರಗಳು	೨೭	೨೩
೨	ವೆಚ್ಚ	೨೫೪.೧೮೬ ಲಕ್ಷ ರೂ.ಗಳು	೨೯೬. ೮೫ ಲಕ್ಷ ರೂ.ಗಳು

ಈ) ಕೊಳವೆ ಬಾವಿ, ತೆರೆದ ಬಾವಿ, ಸಾಮೂಹಿಕ ಕೇಂದ್ರ ಶಾಲಾ ಕಟ್ಟಡ, ಒಳ ರಸ್ತೆಗಳು, ಕೂಡು ರಸ್ತೆಗಳು, ದೇವಸ್ಥಾನ, ಮಸೀದಿ, ಏದ್ಗುಚ್ಛಕ್ಕಿ, ಸ್ಮಶಾನ, ಇತ್ಯಾದಿ ಸೌಲಭ್ಯಗಳನ್ನು ಪುನರ್ವಸತಿ ಕೇಂದ್ರಗಳಲ್ಲಿ ಒದಗಿಸಲಾಗಿದೆ.

ಸಮುದ್ರ ತೀರ ಪ್ರದೇಶಗಳಲ್ಲಿ ದೊರೆಯುತ್ತಿರುವ ವಿಮಾನಗಳ ವಿವರ

೧೦೯೬. ಶ್ರೀ ಜಿ. ರಾಜುಗೌಡ (ಹನೂರು).—ಮಾನ್ಯ ಬಂದರು ಮತ್ತು ವಿಮಾನಯಾನ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕರ್ನಾಟಕ ಸಮುದ್ರ ತೀರ ಪ್ರದೇಶಗಳಲ್ಲಿ ದೊರೆಯುತ್ತಿರುವ ವಿಮಾನಗಳ ವಿವರಗಳೇನು ,

ಆ) ಸಮುದ್ರದ ಆಳದಿಂದ ವಿಮಾನ ತೆಗೆಯಲು ಉಪಯೋಗಿಸುವ ಆಧುನಿಕ ಉಪಕರಣಗಳು ಯಾವುವು ?

ಶ್ರೀ ಎಂ. ರಘುಪತಿ (ವಿಮಾನಯಾನಿಕ ಮತ್ತು ಬಂದರು ಸಚಿವರು).—

ಅ) ಕರ್ನಾಟಕದ ಸಮುದ್ರ ತೀರ ಪ್ರದೇಶಗಳಲ್ಲಿ ದೊರೆಯುತ್ತಿರುವ ವಿಮಾನಗಳ ವಿವರಗಳನ್ನು ಲಗತ್ತಿಸಲಾಗಿದೆ.

ಆ) ಸಮುದ್ರದ ಆಳದಿಂದ ವಿಮಾನ ತೆಗೆಯಲು ಈ ಕೆಳಗಿನ ಆಧುನಿಕ ಉಪಕರಣಗಳನ್ನು ಬಳಸಲಾಗುತ್ತಿದೆ :—

೧ ಸಮುದ್ರದಡಿಯಲ್ಲಿ ವಿಮಾನ ಹುಡಿಯುವ ಟ್ರಾಲ್ ಬಲೆಗಳು,